

ಶಿಷ್ಯೆಯರೊಂದಿಗೆ
ನಿರ್ಮಲಾ ಪಣಿಕ್ಕರ್

ಸಾಧನವನ್ನಾಗಿ ಬಳಸಿಕೊಳ್ಳಬಲ್ಲರು. ಕಣ್ಣಲ್ಲಿ ಕಣ್ಣೀರು ತುಂಬಿ, ನೀರ ಪರದೆ ಹೊಳೆಯುತ್ತಿದ್ದರೆ ದುಃಖ, ಕೆನ್ನೆ ಕೆಂಪೇರಿದರೆ ಕ್ರೋಧ, ಗಲ್ಲದ ಸ್ನಾಯು ಕೆಳಮುಖವಾಗಿದ್ದರೆ ನಿರಾಸೆ, ಹೀಗೆ. ಆದರೆ ಈ ಎಲ್ಲ ಅಂಶಗಳು ಕಾಲಾನುಕ್ರಮದಲ್ಲಿ ಮರೆಯಾಗುತ್ತ ಬಂದವು. 19ನೇ ಶತಮಾನದ ಕಾಲಕ್ಕೆ ಮೋಹಿನಿಯಾಟ್ಟಂನಲ್ಲಿ ಶೃಂಗಾರ ಮತ್ತು ಅಭಿನಯವಷ್ಟೇ ಉಳಿದುಕೊಂಡಿತು. ಈ ಕಲೆಗೆ ಪುನರುತ್ಥಾನದ ಅವಶ್ಯಕತೆ ಇದೆ ಎಂಬುದು ಮನದಟ್ಟಾಯಿತು. ಹೀಗೆಯೇ ಕೇರಳದಲ್ಲಿರುವ ನಂಗಿಯಾರ್ ಕೂತ್ತ್ ಕೂಡ ಅಳಿವಿನಂಚಿಗೆ ಸರಿದಿತ್ತು. 70ರ ದಶಕದಲ್ಲಿ ಈ ಬಗ್ಗೆ ನಾನು ಅಧ್ಯಯನ ಶುರು ಮಾಡಿದೆ. ಆ ಕುರಿತ ಒಂದು ಪುಸ್ತಕವನ್ನೂ ಮಲಯಾಳದಲ್ಲಿ ಬರೆದೆ. ಆ ಸಂದರ್ಭದಲ್ಲಿಯೇ ನಾನು ಗುರು ಅಮ್ಮನ್ನೂರು ಮಾಧವ ಚಾಕ್ಯಾರ್ ಅವರಿಂದ ಕೂಡಿಯಾಟ್ಟಂನ ಅಭಿನಯ ಕೌಶಲವನ್ನು ಕಲಿತುಕೊಂಡೆ. ಅವರು ಅಭಿನಯ ಪರಂಪರೆಯ ಮಾರ್ಗದರ್ಶಕರಿದ್ದಂತೆ. ಅವರಿಂದ ಕಲಿತ ಅನೇಕ ವಿಚಾರಗಳು ನನ್ನ ಆಲೋಚನಾಗತಿಯ ಮೇಲೆ ಪ್ರಭಾವ ಬೀರಿದವು. ಅಭಿನಯದ ಸಾಧ್ಯತೆಗಳನ್ನು ವಿಶ್ಲೇಷಿಸಲು ಶುರು ಮಾಡಿದೆ.

◆ **ಹಾಗಿದ್ದರೆ ಮೋಹಿಯಾಟ್ಟಂ ನೃತ್ಯ ಪ್ರಕಾರಕ್ಕೆ ನೀವು ಅಭಿನಯವನ್ನು ಅನ್ವಯಿಸುವಲ್ಲಿ ಮಾಧವ ಚಾಕ್ಯಾರ್ ಅವರ ಪ್ರಭಾವ ಇದೆ ಎಂದಾಯಿತು.**

ಅವರ ನೃತ್ಯ ಪ್ರಸ್ತುತಿಯನ್ನು ಮೊದಲ ಬಾರಿಗೆ ನೋಡಿದ ಕೂಡಲೇ ನನಗೆ ನಾನು ಇಂತಹ ಮಹಾನುಭಾವ ಗುರುಗಳ ಹುಡುಕಾಟದಲ್ಲಿ ಇದ್ದೇನೆ ಎಂದು ಅರಿವಾಯಿತು. ವೇದಿಕೆಯ ಮೇಲೆ ಅವರು ಕರುಣ ರಸವನ್ನು ಪ್ರಸ್ತುತಪಡಿಸುತ್ತಿದ್ದರೆ, ಸಭಿಕರ ಕಂಗಳಲ್ಲಿ ಕಣ್ಣೀರು ಧಾರೆಯಾಗಿ ಹರಿಯುವುದು. ಸಾತ್ವಿಕ ಅಭಿನಯವು ರಸಾನುಭವದ ಮೂಲತತ್ತ್ವ. ಕೂಡಿಯಾಟ್ಟಂನ ಅಭಿನಯ ತಂತ್ರಗಳು ಕಥಕಳಿಗಿಂತ ಭಿನ್ನವಾದುವು. ಭಾವನೆಗಳನ್ನು ಸೂಕ್ಷ್ಮ ವಿಧಾನಗಳಲ್ಲಿ ವ್ಯಕ್ತಪಡಿಸುವ ತಂತ್ರಗಳು ಅದರಲ್ಲಿವೆ. ಇಂತಹ ಮಹಾನುಭಾವ ಕಲಾವಿದರ ಅಭಿನಯ ಕೌಶಲಗಳನ್ನು ಕಂಡು, ಅಂತಹ ಅಭಿನಯ ಚಾತುರ್ಯವನ್ನು ಮೋಹಿನಿಯಾಟ್ಟಂನಲ್ಲಿಯೂ ಅಳವಡಿಸಿಕೊಳ್ಳಬಹುದು ಎಂಬುದು ನನಗೆ ಹೊಳೆಯಿತು. ಅಂದಿನಿಂದ ನಾನು ನಿಧಾನವಾಗಿ ಈ ಸ್ವೀಕಾರ ಪ್ರಕ್ರಿಯೆಯ ಕುರಿತು ಚಿಂತನೆ ಮಾಡಿದೆ. 'ಹಸ್ತಲಕ್ಷಣ ದೀಪಿಕಾ'ವನ್ನು ಆಧರಿಸಿಕೊಂಡು, ಮೋಹಿನಿಯಾಟ್ಟಂನಲ್ಲಿ ಹಸ್ತ ಅಭಿನಯದ ಜೊತೆಗೆ ನೇತ್ರ ಅಭಿನಯವನ್ನೂ ಅನ್ವಯಿಸುವ ಕೆಲಸ ಮಾಡಿದೆ. ಇವುಗಳನ್ನು ದೇಸೀ ಹಾಡುಗಳಿಗೆ ಕೊರಿಯೊಗ್ರಾಫ್ ಮಾಡುವಾಗ ಅಳವಡಿಸಿದೆ. 'ನಟನ ಕೈಶಿಕಾ'ಗೆ ಬರುವ ಎಲ್ಲ ವಿದ್ಯಾರ್ಥಿಗಳಿಗೆ ಇದೇ ಮಾದರಿಯಲ್ಲಿ ನಾನು ತರಬೇತಿ ನೀಡುತ್ತಿದ್ದೆ. ಹೀಗೆ ನಿಧಾನವಾಗಿ 'ಮೋಹಿನಿಯಾಟ್ಟಂ' ತನ್ನ ಹಳೆಯ ನೃತ್ಯಲಾಸ್ಯವನ್ನು ಮರಳಿ ಪಡೆದು, ವೇದಿಕೆಯ